KAUK210004782014

**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಅಂಕೋಲಾ , ಉತ್ತರ ಕನ್ನಡ**

-ಃಉಪಸ್ಥಿತರುಃ-

ಪ್ರಶಾಂತ ಬಾದವಾಡಗಿ

ಬಿ.ಎ.,ಎಲ್.ಎಲ್.ಬಿ., (ಸ್ಪೆ.)

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಅಂಕೋಲಾ

ಮೂಲ ದಾವಾ ನಂ ಬರ : 48/2014

ದಿನಾಂಕ: 9 ನೇ ನವೆಂಬರ್ 2023

**ವಾದಿಯರುಃ**

ಗಣಪತಿ ತಿಮ್ಮಪ್ಪ ಆಚಾರಿ(ಮೃತ)

ಇವರ ವಾರಸುದಾರರು

1 ಎ) ರಾಜೇಶ ಗಣಪತಿ ಆಚಾರಿ

ವಯ: 41 ವರ್ಷ,

ಉಃ ರೈತಾಬಿ ಹಾಗೂ ಆಚಾರಿ ಕೆಲಸ,

ಸಾಃ ತೆಂಕಣಕೇರಿ, ತಾಃ ಅಂಕೋಲಾ

1 ಬಿ) ಶ್ರೀಮತಿ ಸಂಧ್ಯಾ ಯಾನೆ ಜ್ಯೋತಿ ಕೋಂ ಭಾಸ್ಕರ ಆಚಾರ್ಯ , ವಯ: 40 ವರ್ಷ, ಉಃ ರೈತಾಬಿ , ಸಾಃ ನೆಲ್ಲಿಕೇರಿ, ನೆಹರು ನಗರ, ತಾಃ ಕುಮಟಾ

1 ಸಿ ) ಶ್ರೀಮತಿ ಪ್ರಶೀಲ ಯಾನೆ ಶೀತಲ್ ಕೋಂ ಪ್ರಕಾಶ ಆಚಾರಿ, ವಯ: 32 ವರ್ಷ, ಉಃ ರೈತಾಬಿ ,

ಸಾಃ ಮನೆ ನಂ. 1001, ದಾಟವಾಡಾ, ತಿವಿಮ್,
ಬಾರ್ಡೇಜ್, ಗೋವಾ

**(ಶ್ರೀಮತಿ ಎಸ್.ಎನ್ ಹೆಬ್., ವಕೀಲರು)**

-ವಿರುದ್ಧ-

**<u>ಪ್ರತಿವಾದಿಃ</u>**

ಮಂಜುನಾಥ ಗಣಪತಿ ಶೇಟ್,
ವಯ: 70 ವರ್ಷ, ಉಃ ಬಂಗಾರದ ಕೆಲಸ,
ಸಾಃ ತೆಂಕಣಕೇರಿ, ತಾಃ ಅಂಕೋಲಾ

**(ಶ್ರೀ ಎಂ.ಬಿ.ಹೆಬ್., ವಕೀಲರು)**

---

| | | | |
|---|---|---|---|
| ದಾವಾ ದಾಖಲಾದ ದಿನಾಂಕಃ | : 19-4-2014 | | |
| ದಾವೆಯ ಸ್ವರೂಪಃ | : ನಿರ್ದಿಷ್ಟ ಪರಿಹಾರ, ನಿರಂತರ ಮನಾಯಿ ಹಾಗೂ ಕಂದಾಯ ದಾಖಲೆ ಸರಿಪಡಿಸಲು | | |
| ಸಾಕ್ಷಿಯನ್ನು ವಿಚಾರಣೆ ಪ್ರಾರಂಭ ದಿನಾಂಕಃ | 06-08-2021 | | |
| ಸಾಕ್ಷಿ ಮುಕ್ತಾಯ ದಿನಾಂಕಃ | 6-10-2023 | | |
| ತೀರ್ಪನ್ನು ನೀಡಿದ ದಿನಾಂಕಃ | 09-11-2023 | | |
| ಒಟ್ಟು ಕಾಲಾವಧಿಃ | ವರ್ಷ | ತಿಂಗಳು | ದಿವಸ |
| | - 9- | -6 - | -21- |

---

**<u>ತೀರ್ಪು</u>**

ನಿರ್ದಿಷ್ಟ ಪರಿಹಾರ, ನಿರಂತರ ಮನಾಯಿ ಹಾಗೂ ಕಂದಾಯ ದಾಖಲೆ ಸರಿಪಡಿಸಲು ಕೇಳಿ ವಾದಿ ದಾವೆ ಸಲ್ಲಿಸಿರುತ್ತಾರೆ.

**<u>ವಾದ ಪತ್ರದ ಸಂಕ್ಷಿಪ್ತ ವಿವರಃ</u>**-

ಅಂಕೋಲಾ ತಾಲೂಕಿನ ತೆಂಕಣಕೇರಿ ಗ್ರಾಮದ ಸ. ನಂ.205/3 ವಿಸ್ತೀರ್ಣ 0-4-0 ಹಾಗೂ ಬೊಬ್ರುವಾಡ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿಯ ಹಂಚಿನ ಹೊದಿಕೆಯುಳ್ಳ ಮನೆ ನಂ. 86 ಎ ಇವು ದಾವಾಸ್ತಿಗಳಾಗಿರುತ್ತವೆ. ಸದರಿ ದಾವಾಸ್ತಿಯ ಕಬ್ಜೆಯನ್ನು ವಾದಿ ಅನಾದಿಕಾಲದಿಂದಲೂ ಹೊಂದಿದ್ದಿರುತ್ತದೆ. ಸದರಿ ವಾದಿಯು ದಾವಾಸ್ತಿಯ ಕಬ್ಜಾ ವಹಿವಾಟಿಯನ್ನು ತಮ್ಮ ತಂದೆಯ ಕಾಲದಿಂದಲೂ ಗೇಣಿದಾರಿಕೆ ನಾತೆಯಿಂದ ಹೊಂದಿದ್ದು, ಈ ಕುರಿತು ಭೂನ್ಯಾಯ ಮಂಡಳಿಯವರು 1976 ರಲ್ಲಿ ಕೆಎಲ್‌ಆರ್ ಎಸ್‌ಆರ್ 9109+9764 ರ ಪ್ರಕಾರ ವಾದಿಗೆ ಜಮೀನು ಮಂಜೂರಿ ಮಾಡಿರುತ್ತಾರೆ. ಸದರಿ ದಾವಾ ಸ ನಂ. 205/3 ವಿಸ್ತೀರ್ಣ 0-4-0 ಆಸ್ತಿಯಲ್ಲಿ ವಾದಿಗೆ ಸಂಬಂಧಿಸಿದ ಮನೆ ಇದ್ದು, ಆತ ಸದರಿ ಮನೆಯಲ್ಲಿ ಚಿಕ್ಕಂದಿನಿಂದಲೂ ಬೆಳೆದುಬಂದಿದ್ದು, ವೃತ್ತಿಯಿಂದ ಬಡಿಗೆತನ ಮಾಡುತ್ತಿದ್ದರೂ ಸಹ ದಾವಾಸ್ತಿಯಲ್ಲಿ ತನ್ನ ದೈಹಿಕ ಶ್ರಮ ವಹಿಸಿ ಆರ್ಥಿಕ ಹಣ ಹೂಡಿ ಅಡಿಕೆ, ತೆಂಗು ಹಾಗೂ ಬಾಳೆ ಹಣ್ಣಿನ ಗಿಡಮರಗಳನ್ನು ನೆಟ್ಟು ಬೆಳೆಸಿ ಎಲ್ಲ ರೀತಿಯಿಂದಲೂ ಅಭಿವೃದ್ಧಿಪಡಿಸಿಕೊಂಡು ಬಂದಿದ್ದಿರುತ್ತದೆಂದು ತಿಳಿಸಿರುತ್ತಾರೆ.

**2**. ಮುಂದುವರೆದು ಭೂಸುಧಾರಣಾ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ದಾವಾಸ್ತಿಯು ಮಾಲೀಕನಾದ ಪ್ರತಿವಾದಿ ಹೆಸರಿನಲ್ಲಿದ್ದು, ಆ ಸಮಯದಲ್ಲಿ ಮನೆ ಕಟ್ಟಿಸಿದ್ದರಿಂದ ಪಂಚಾಯತಿ ದಾಖಲಾತಿಗಳೆಲ್ಲವೂ ಪ್ರತಿವಾದಿ ಹೆಸರಿನಲ್ಲಿರುತ್ತದೆ. ಸದರಿ ವಾದಿಗೆ ಭೂನ್ಯಾಯ ಮಂಡಳಿಯು ಗೇಣಿದಾರಿಕೆ ಹಕ್ಕಿನ ಕುರಿತು ಮಂಜೂರಿ ಮಾಡಿದ ನಂತರವೂ ಸಹ ಸದರಿ ಮನೆಯು ಪ್ರತಿವಾದಿ ಹೆಸರಿನಲ್ಲಿ ಮುಂದುವರೆದಿದ್ದು, ವಾದಿ ಕಳೆದ

50 ವರ್ಷಗಳಿಗಿಂತಲೂ ಹೆಚ್ಚು ಕಾಲ ಸದರಿ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದಿರುತ್ತದೆಂದು ತಿಳಿಸಿರುತ್ತಾರೆ.

**3.** ಮುಂದುವರೆದು ಸದರಿ ಮನೆಯ ಕುರಿತು ಯಾವುದೇ ಕಾಯ್ದೆ ತೊಡಕುಗಳು ಬರಬಾರದು ಎಂಬುವ ಸದುದ್ದೇಶದಿಂದ ಪ್ರತಿವಾದಿಯು ಒಪ್ಪಿಗೆಯನ್ನು ಬರೆದುಕೊಟ್ಟಿದ್ದು, ಅದರ ಪ್ರಕಾರ ವಾದಿ ಪ್ರತಿವಾದಿಗೆ 6000/- ರೂ. ಕೊಡಬೇಕೆಂದು ನಿರ್ಧರಿಸಿದ್ದು, ಈ ಕುರಿತು ಪ್ರತಿವಾದಿ ಬರೆದುಕೊಟ್ಟ ಪ್ರಮಾಣಪತ್ರವನ್ನು ಸಹ ತೆಂಕಣಕೇರಿ ಪಂಚಾಯತಿಗೆ ಹೆಸರು ಬದಲಾವಣೆಗಾಗಿ ನೀಡಿದ್ದಿರುತ್ತದೆ. ಆದರೆ ಯಾವ ಕಾರಣಕ್ಕಾಗಿ ಪಂಚಾಯತಿ ಇಲಾಖೆಯವರು ದಾವಾ ಮನೆಯ ಆಸ್ತಿಗೆ ವಾದಿಯ ಹೆಸರನ್ನು ನಮೂದಿಸದೆ ಬಿಟ್ಟಿರುತ್ತಾರೆಂದು ವಾದಿಗೆ ಇದುವರೆಗೂ ತಿಳುವಳಿಕೆಯಲ್ಲಿರುವುದಿಲ್ಲವೆಂದು ತಿಳಿಸಿರುತ್ತಾರೆ.

**4.** ಸದರಿ ಪ್ರತಿವಾದಿಗೆ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ವ, ಹಿತಾಸಕ್ತಿ ಇರದಿದ್ದರೂ ಸಹ ಪಹಣಿ ಪತ್ರಿಕೆಯಲ್ಲಿ ತನ್ನ ಹೆಸರು ಇರುವುದರ ಗೈರು ಫಾಯ್ದೆ ಪಡೆದುಕೊಂಡು ಸ.ನಂ. 205/3 ರಲ್ಲಿ ಫೋಡಿ ಮಾಡಿಸಿಕೊಂಡಿದ್ದಿರುತ್ತದೆ. ಸದರಿ ಫೋಡಿ ಮಾಡುವ ಸಮಯದಲ್ಲಿ ವಾದಿಗೆ ನೋಟೀಸು ವ, ಹೇಳಿಕೆ ಸಲ್ಲಿಸಲು ಯಾವುದೇ ಅವಕಾಶ ನೀಡಿರುವುದಿಲ್ಲ. ದಾವಾಸ್ತಿ ಕುರಿತಂತೆ ಭೂನ್ಯಾಯ ಮಂಡಳಿಯು ವಾದಿಗೆ ಜಮೀನು ಮಂಜೂರು ಮಾಡಿದರೂ ಸಹ ಕಂದಾಯ ಇಲಾಖೆಯವರು ಆ ಕುರಿತು ಪಟ್ಟಾ ಕೊಡದೇ ಹಾಗೂ ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಿಸದೇ

ಉದ್ದೇಶಪೂರ್ವಕವಾಗಿ ಮುಂದೂಡುತ್ತಿದ್ದಾರೆ. ಅದು ಅಲ್ಲದೆ ಇತ್ತೀಚಿನ ದಿನಗಳಲ್ಲಿ ಪ್ರತಿವಾದಿಯು ದಾವಾಸ್ತಿಯ ಮನೆಯ ಕಬ್ಜೆ ಖಾಲಿ ಮಾಡುವಂತೆ ವಾದಿಗೆ ಹೇಳುತ್ತಿದ್ದು, ಈ ಕುರಿತಾಗಿ ದಿಃ 05-04-2014 ರಂದು ತನ್ನ ಮಕ್ಕಳೊಂದಿಗೆ ದಾವಾ ಸ್ಥಳಕ್ಕೆ ಬಂದು ವಾದಿಯನ್ನು ಬಲವಂತವಾಗಿ ಹೊರಹಾಕಲು ಪ್ರಯತ್ನಿಸುತ್ತಿದ್ದಾರೆ. ಪ್ರತಿವಾದಿ ಹಾಗೂ ಆತನ ಮಕ್ಕಳು ಬೇಕಾಯ್ದೆಶೀರ ರೀತಿಯಿಂದ ವಾದಿಯನ್ನು ಮನೆಯಿಂದ ಹೊರ ಹಾಕಿದರೆ ಅವರಿಗೆ ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುತ್ತದೆ. ಈ ಕುರಿತಾಗಿ ವಾದಿ ಅಂಕೋಲಾ ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ದಾವಾಸ್ತಿಯ ಪಂಚಾಯತಿ ರೆಕಾರ್ಡ ಪ್ರತಿವಾದಿಯ ಹೆಸರಿನಲ್ಲಿರುವುದರಿಂದ ನ್ಯಾಯಾಲಯದಿಂದ ಪರಿಹಾರ ಪಡೆದುಕೊಳ್ಳಿರಿ ಎಂದು ತಿಳಿಸಿರುತ್ತಾರೆ. ಸದರಿ ಪ್ರತಿವಾದಿಯು ತನ್ನ ಪ್ರಭಾವ ಬಳಸಿ ಕಂದಾಯ ಇಲಾಖೆಯಲ್ಲಿ ವಾದಿಯ ಹೆಸರಿನಲ್ಲಿ ಪಟ್ಟಾ ನೀಡುವಂತೆ ವ್ಯವಸ್ಥೆ ಮಾಡಿರುತ್ತಾರೆ. ದಾವಾಸ್ತಿಯ ಕಬ್ಜಾ ವಹಿವಾಟಿಗೆ ತೊಂದರೆ ಮಾಡಿ ಮನೆಯಿಂದ ಹೊರಗೆ ಹಾಕಲು ಪ್ರಯತ್ನಿಸಿದ ನಂತರದ ದಿನಗಳಲ್ಲಿ ಸೂಕ್ತ ಪರಿಹಾರ ಕೇಳಿ ದಾವೆ ಸಲ್ಲಿಸುವ ಕಾರಣ ಉಂಟಾಗಿರುತ್ತದೆಂದು ತಿಳಿಸಿರುತ್ತಾರೆ.

5. ದಾವಾ ಸಮನ್ಸ ಜಾರಿಯಾದ ನಂತರ ಪ್ರತಿವಾದಿಯು ವಕೀಲರ ಮುಖಾಂತರ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ.

**ಪ್ರತಿವಾದ ಪತ್ರದ ಸಂಕ್ಷಿಪ್ತ ವಿವರಃ**

**6.** ದಾವೆಯಲ್ಲಿ ತಿಳಿಸಿದ ಸಂಗತಿಗಳು ಕಾನೂನಿಗೆ ಹಾಗೂ ಸತ್ಯಕ್ಕೆ ದೂರವಾದ ಸಂಗತಿಗಳಾಗಿರುತ್ತವೆ. ದಾವಾ ಸ. ನಂ. 205/3 ಕ್ಷೇತ್ರ 0-4-0 ಇದು ವಾದಿಗೆ ಸಂಬಂಧಿಸಿರುವುದಿಲ್ಲ. ಸದರಿ ವಾದಿಯು 2001 ರಿಂದ 2011 ರವರೆಗೆ ಮನೆ ನಂ. 86 ಎ ರಲ್ಲಿ ಬಾಡಿಗೆ ಇದ್ದು, ಪ್ರತಿವಾದಿ ನೋಟೀಸು ನೀಡಿದ ನಂತರ ದಿಃ 10-10-2011 ರಂದು ಮನೆ ಖಾಲಿ ಮಾಡಿಕೊಂಡು ಹೋಗಿದ್ದಿರುತ್ತದೆ. ವಾದಿ ಕೆಲವು ವರ್ಷಗಳವರೆಗೆ ಮಾತ್ರ ದಾವಾಸ್ತಿಯ ಸ್ವಾಧೀನದಲ್ಲಿ ಇದ್ದು, ತದನಂತರದಲ್ಲಿ ಮುಂದುವರೆದಿರುವುದಿಲ್ಲ. ವಾದಿಯು ತನ್ನ ತಂದೆಯ ಕಾಲದಿಂದಲೂ ದಾವಾಸ್ತಿಯ ಬೇಸಾಯ ಹಾಗೂ ಸ್ವಾಧೀನ ಹೊಂದಿರುತ್ತಾರೆಂದು ತಿಳಿಸಿದ ಸಂಗತಿ ಸುಳ್ಳಿನಿಂದ ಕೂಡಿರುತ್ತದೆ. ಭೂನ್ಯಾಯ ಮಂಡಳಿಯಲ್ಲಿ 1986 ರಲ್ಲಿ ದಾವಾಸ್ತಿಯ ಕುರಿತಂತೆ ಆದ ಆದೇಶದ ಬಗ್ಗೆ ಪ್ರತಿವಾದಿಯ ಗಮನಕ್ಕೆ ಇರುವುದಿಲ್ಲ, ಸ.ನಂ. 205/3 ರಲ್ಲಿ ವಾದಿಯ ಮನೆ ಇದೆ ಎಂದರೆ ಸರಿಯಲ್ಲ ಹಾಗೂ ದಾವಾಸ್ತಿಯಲ್ಲಿ ಬಾಳೆಗಿಡ, ಅಡಿಕೆ, ತೆಂಗಿನ ಗಿಡ ಬೆಳೆಸಿರುತ್ತಾರೆಂದು ತಿಳಿಸಿರುವುದು ಸತ್ಯಕ್ಕೆ ದೂರವಾಗಿದೆ ಎಂದು ತಿಳಿಸಿರುತ್ತಾರೆ.

**7.** ಮುಂದುವರೆದು ಸದರಿ ವಾದಿಯು 50 ವರ್ಷಗಳಿಂದ ದಾವಾಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸ್ತವ್ಯವಿದ್ದ ಬಗ್ಗೆ , ಅಫಿಡವಿಟ್ ಮೂಲಕ ಸದರಿ ಮನೆಯನ್ನು ಪ್ರತಿವಾದಿ ಬಿಟ್ಟುಕೊಟ್ಟಿದ್ದರ ಬಗ್ಗೆ, ಅದಕ್ಕೆ ಸಂಬಂಧಿಸಿದಂತೆ ರೂ. 6000/- ನಿಗದಿಪಡಿಸಿದ್ದರ ಕುರಿತು ತಿಳಿಸಿದ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಮನೆ ಖಾಲಿ ಮಾಡುವಂತೆ ವಾದಿಗೆ ನೋಟೀಸು ನೀಡಿರುವ ಸಂಗತಿಯನ್ನು ಒಪ್ಪಿಕೊಂಡು ಉಳಿದ ಎಲ್ಲ ಸಂಗತಿಗಳನ್ನು

ಅಲ್ಲಗಳೆದು ವಾದಿಯ ದಾವೆ ನಿರ್ದಿಷ್ಟ ಅಧಿನಿಯಮದಡಿಯಲ್ಲಿ ಬರುವ ಕರಾರು ಎಂಬುವ ವ್ಯಾಪ್ತಿಯಲ್ಲಿರುವುದಿಲ್ಲ. ಕಾರಣ ದಾವೆಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**8.** ವಾದ –ಪ್ರತಿವಾದಪತ್ರದಲ್ಲಿ ತಿಳಿಸಿದ ಸಂಗತಿಗಳ ಆಧಾರದ ಮೇಲಿಂದ ಮೊದಲಿನ ಪೀಠಾಸೀನಾಧಿಕಾರಿಗಳು ವಿವಾದಾಂಶಗಳನ್ನು ರಚಿಸಿದ್ದು, ಅವುಗಳು ಈ ಕೆಳಕಂಡಂತೆ ಇರುತ್ತವೆ.

**ವಿವಾದಾಂಶಗಳು**

1) Whether the plaintiffs prove that the land tribunal Ankola had granted occupancy rights in favour of father of the plaintiff no. 1 in respect of suit schedule properties?

2) Whether the Plaintiffs prove that father of the plaintiffs had constructed residential house in property bearing Sy. No. 205/3 measuring 00-04-00 and residing therein and schedule properties are in possession and enjoyment of the plaintiffs since 50 years, as pleaded in para 4 of the plaint?

3) Whether the plaintiffs prove that the land granted to the father of the Plaintiff no. 1 was in the name of the owner i.e., defendant, name of the defendant was continued in revenue records, therefore defendant gave consent to change the name and to incorporate, name of the father of the

plaintiff in Panchayat records as such defendant executed an affidavit by receiving Rs. 6000/- from the father of the plaintiff, as pleaded in para 5 of the plaint?

4) Whether the plaintiffs are entitled for the relief of specific performance?

5) Whether the plaintiffs are entitled for the relief of permanent injunction?

6) What Order or decree ?

**9.** ದಾವೆಯಲ್ಲಿನ ಸಂಗತಿಗಳನ್ನು ಸಾಬೀತುಪಡಿಸಲು ವಾದಿ ನಂ. 1(ಎ) ರವರು ಪಿಡಬ್ಲ್ಯೂ-1 ಎಂದು ಸಾಕ್ಷಿ ನುಡಿದು, ತನ್ನ ಪರ ಪಿಡಬ್ಲ್ಯೂ-2 ಎಂದು ಸಾಕ್ಷಿದಾರರನ್ನು ಮಾಡಿಕೊಂಡು, ನಿ.ಪಿ. 1 ರಿಂದ 38 ಎಂದು ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಯ ಮೊಕ್ತಾರನಾಮೆದಾರನು ಡಿಡಬ್ಲ್ಯೂ-1 ಎಂದು ಸಾಕ್ಷಿ ನುಡಿದಿದ್ದು, ಅವರ ಪರ ನಿಡಿ-1 ರಿಂದ 25 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನ್ಯಾಯಾಲಯದ ಪರವಾಗಿ ನಿಸಿ -1 ಮತ್ತು 2 ಎಂದು ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**10.** ವಾದಿ-ಪ್ರತಿವಾದಿಯರ ಪರ ಸುನಾವಣೆಯನ್ನು ಆಲಿಸಿ, ಸಾಕ್ಷಿ ಅವಲೋಕಿಸಿದ ನಂತರ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದ್ದೇನೆ.

ವಿವಾದಾಂಶ ನಂ. 1: ನಕಾರಾತ್ಮಕ

ವಿವಾದಾಂಶ ನಂ. 2: ನಕಾರಾತ್ಮಕ

ವಿವಾದಾಂಶ ನಂ. 3: ನಕಾರಾತ್ಮಕ

ವಿವಾದಾಂಶ ನಂ. 4: ಸಕಾರಾತ್ಮಕ

ವಿವಾದಾಂಶ ನಂ. 5: ನಕಾರಾತ್ಮಕ

ವಿವಾದಾಂಶ ನಂ. 6: ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

11. **ವಿವಾದಾಂಶ ನಂ. 1 ರಿಂದ 5:-** ಸದರಿ ವಿವಾದಾಂಶಗಳು ಒಂದಕ್ಕೊಂದು ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**12.** ದಾವೆಯಲ್ಲಿಯ ಸಂಗತಿಗಳನ್ನು ಸಾಬೀತುಪಡಿಸಲು ಪ್ರತಿವಾದಿಯ ವಾರಸುದಾರನಾದ ಆತನ ಮಗ ಪಿಡಬ್ಲ್ಯೂ-1 ಎಂದು ಸಾಕ್ಷಿ ನುಡಿದಿರುತ್ತಾರೆ. ಅಂಕೋಲಾ ತಾಲೂಕಿನ ಶಿರಕುಳಿ ಗ್ರಾಮದ ಜಮೀನು ಸ ನಂ. 205/3 ವಿಸ್ತೀರ್ಣ 0-4-0 ಹಾಗೂ ಮನೆ ನಂ. 86 ಎ ಇವುಗಳ ಕುರಿತಾಗಿ ಭೂನ್ಯಾಯ ಮಂಡಳಿಯು ಕೆಎಲ್‌ಆರ್ ಎಸ್‌ಆರ್ 9109+9764 ರ ಆದೇಶದ ಪ್ರಕಾರ 1976 ರಲ್ಲಿ ಜಮೀನು ಮಂಜೂರಿ ಮಾಡಿರುತ್ತಾರೆಂದು ಪಿಡಬ್ಲ್ಯೂ -1 ರವರು ಸಾಕ್ಷಿ ನುಡಿದಿರುತ್ತಾರೆ. ಈ ಕುರಿತು ವಾದಿ ಪರ ಗುರುತಿಸಿಕೊಂಡ ದಾಖಲೆಗಳನ್ನು ಅವಲೋಕಿಸಲು ವಾದಿ ಹಾಗೂ ಆತನ ಸಂಬಂಧಿಯಾದ ವೆಂಕಪ್ಪ ಗಣಪತಿ ಆಚಾರಿರವರು ತೆಂಕಣಕೇರಿ ಗ್ರಾಮದ ಸ ನಂ. 205/3 ವಿಸ್ತೀರ್ಣ 0-4-0 ಹಾಗೂ 205/6 ವಿಸ್ತೀರ್ಣ 0-6-8 ಜಮೀನುಗಳಿಗೆ ಗೇಣಿದಾರಿಕೆ ಹಕ್ಕು ಕೇಳಿ ಭೂನ್ಯಾಯ ಮಂಡಳಿ ಅಂಕೋಲಾ ರವರಲ್ಲಿ ಕರ್ನಾಟಕ ಭೂ

ಸುಧಾರಣಾ ಕಾಯ್ದೆ ಕಲಂ 48-ಎ(1) ರಡಿಯಲ್ಲಿ ಅರ್ಜಿ ಸಲ್ಲಿಸಿರುವುದು ನಿಪಿ-15 ಎಂದು ಗುರುತಿಸಿಕೊಂಡ ದಾಖಲೆಯಿಂದ ಕಂಡುಬರುತ್ತದೆ. ಸದರಿ ನಿಪಿ-15 ರಲ್ಲಿ ತೆಂಕಣಕೇರಿ ಗ್ರಾಮದ ಸ ನಂ. 205/3 ರಲ್ಲಿ 0-4-0 ಹಾಗೂ 205/6 ರಲ್ಲಿ 0-6-8 ಜಮೀನನ್ನು ಪ್ರಸ್ತುತ ವಾದಿ ಹಾಗೂ ಆತನ ಸಂಬಂಧಿಯಾದ ವೆಂಕಪ್ಪ ಗಣಪತಿ ಆಚಾರಿ ರವರಿಗೆ ದಿಃ 27-10-1976 ರಂದು ಮಂಜೂರಿ ಮಾಡಿರುವುದು ಸದರಿ ದಾಖಲೆಯಿಂದ ಕಂಡುಬರುತ್ತದೆ. ಈ ಕುರಿತು ನಿಪಿ-16 ಎಂದು ಗುರುತಿಸಿಕೊಂಡ ಫಾರ್ಮ ನಂ. 10 ಸಹ ಸ್ಪಷ್ಟಪಡಿಸುತ್ತದೆ. ಸದರಿ ನಿಪಿ-15 ರಲ್ಲಿಯ ವೆಂಕಪ್ಪ ಗಣಪತಿ ಆಚಾರಿಯು ವಾದಿಗೆ ಯಾವ ರೀತಿ ಸಂಬಂಧಿ ಎಂದು ವಾದಿ ದಾವೆಯಲ್ಲಿ ಸ್ಪಷ್ಟಪಡಿಸಿರುವುದಿಲ್ಲ. ಈ ಕುರಿತು ಪಿಡಬ್ಲ್ಯೂ -1 ರವರ ಪಾಟೀಸವಾಲಿನ ಭಾಗವನ್ನು ಅವಲೋಕಿಸಲು ವೆಂಕಪ್ಪ ಗಣಪತಿ ಆಚಾರಿ ತನಗೆ ಸಂಬಂಧದಲ್ಲಿ ಅಜ್ಜನಾಗಬೇಕೆಂದು ತಿಳಿಸಿರುತ್ತಾರೆ.

**13.** ತೆಂಕಣಕೇರಿ ಜಮೀನು ಸ. ನಂ. 205/3 ರ ಒಟ್ಟು ವಿಸ್ತೀರ್ಣ 0-7-0 ಇರುವುದು ನಿಡಿ -11 ಎಂದು ಗುರುತಿಸಿಕೊಂಡ ಹಿಸ್ಸಾ ನಂ. 11 ರಿಂದ ಕಂಡುಬರುತ್ತದೆ. ಸದರಿ ಜಮೀನು ಮೂಲದಲ್ಲಿ ಪ್ರತಿವಾದಿ ಕುಟುಂಬಕ್ಕೆ ಸೇರಿದ ಆಸ್ತಿ ಇರುವುದು ನಿಪಿ-19 ಎಂದು ಗುರುತಿಸಿಕೊಂಡ ಮುಟೇಶನ್ ಪ್ರತಿಯಿಂದ ಹಾಗೂ ನಿಪಿ-22 ಎಂದು ಗುರುತಿಸಿಕೊಂಡ 1952-53 ರ ಸಾಲಿನಿಂದ 1964-65 ನೇಸಾಲಿನ ಪಹಣಿ ಪತ್ರಿಕೆಯಿಂದ ಸ್ಪಷ್ಟವಾಗಿ ಕಂಡುಬರುತ್ತಿದ್ದು, ಸದರಿ ಆಸ್ತಿಯ ಪೈಕಿ 0-3-0 ಆಸ್ತಿಯನ್ನು ಪ್ರತಿವಾದಿ ಕುಟುಂಬದವರು ಖುದ್ದಾಗಿ ಸಾಗುವಳಿ ಮಾಡುತ್ತಿದ್ದು, ಉಳಿದ 0-4-0

ಜಮೀನು ವೆಂಕಪ್ಪ ಗಣಪತಿ ಆಚಾರಿ ಈತನು ಮೂಲ ಗೇಣಿನಾತೆಯಿಂದ ವಹಿವಾಟಿ ಮಾಡುತ್ತಿರುವ ಕುರಿತು ನಿಡಿ-22 ಎಂದು ಗುರುತಿಸಿಕೊಂಡ ಪಹಣಿ ಪತ್ರಿಕೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ.

**14.** ಈ ಕುರಿತಾಗಿ ಪ್ರತಿವಾದಿ ಪರ ಗುರುತಿಸಿಕೊಂಡ ನಿಡಿ-10 ಮತ್ತು 11 ದಾಖಲೆಗಳನ್ನು ಅವಲೋಕಿಸಿದಾಗ ಸದರಿ ದಾವಾಸ್ತಿಗೆ ತನ್ನ ಹೆಸರನ್ನು ಸಹ ಸೇರಿಸಬೇಕೆಂದು ದಿಃ 22-05-1976 ರಂದು ವಾದಿ ನೀಡಿದ ಅರ್ಜಿಗೆ ದಿಃ 23-05-1976 ರಂದು ವೆಂಕಪ್ಪ ಗಣಪತಿ ಆಚಾರಿ ಈತನು ತನ್ನ ಹೆಸರಿನ ಜೊತೆ ಸೋದರನ ಮಗನಾದ ಗಣಪತಿ ತಿಮ್ಮಪ್ಪ ಆಚಾರಿಯ ಹೆಸರನ್ನು ಸಹ ಸ. ನಂ. 205/3 ರ ಪೈಕಿ 0-4-0 ಆಸ್ತಿಗೆ ಸೇರಿಸಬೇಕೆಂದು ಭೂನ್ಯಾಯ ಮಂಡಳಿ ಮುಂದೆ ಬರೆದುಕೊಟ್ಟಿದ್ದು, ತದನಂತರದಲ್ಲಿ ನಿಪಿ-1 ರ ಪ್ರಕಾರ ದಿಃ 27-10-1976 ರಂದು ತೆಂಕಣಕೇರಿ ಗ್ರಾಮದ ಸ ನಂ. 205/3 ರ ಪೈಕಿ 0-4-0 ಆಸ್ತಿಯನ್ನು ಹಾಗೂ ಸ ನಂ. 205/6 ವಿಸ್ತೀರ್ಣ 0-6-8 ಆಸ್ತಿಗಳನ್ನು ವಾದಿ ಹಾಗೂ ವೆಂಕಪ್ಪ ಗಣಪತಿ ಆಚಾರಿ ರವರ ಹೆಸರಿನಲ್ಲಿ ಮಂಜೂರಿ ಮಾಡಿರುವುದು ಕಂಡುಬರುತ್ತದೆ. ಸದರಿ ಭೂನ್ಯಾಯ ಮಂಡಳಿಯಿಂದ ಜಮೀನು ಮಂಜೂರಿಯಾದ ನಂತರ ಆ ಕುರಿತಾಗಿ ಪಟ್ಟಾ ನೀಡಲು ಹಾಗೂ ಪಹಣಿ ಪತ್ರಿಕೆ ಮಾಡಿಕೊಳ್ಳಲು ಪ್ರತಿವಾದಿ ತೊಂದರೆ ಉಂಟುಪಡಿಸಿರುತ್ತಾರೆಂದು ವಾದಿಯ ವಾದವಿರುತ್ತದೆ. ಆದರೆ ಈ ಕುರಿತಾಗಿ ವಾದಿ ಯಾವುದೇ ಪೂರಕ ಸಾಕ್ಷ್ಯಾಧಾರಗಳನ್ನು ನೀಡಿರುವುದಿಲ್ಲ. ಈ ಕುರಿತು ವಾದಿ ಪರ ಗುರುತಿಸಿಕೊಂಡ ದಾಖಲೆಗಳನ್ನು

ಅವಲೋಕಿಸಲು ವೆಂಕಪ್ಪ ಗಣಪತಿ ಆಚಾರಿ ಈತನು ದಿಃ 16-05-1979 ರಂದು ಮೃತಪಟ್ಟ ನಂತರ ಜಮೀನು ಸ. ನಂ. 205/3 ರ ಪೈಕಿ 0-4-0 ಆಸ್ತಿಗೆ ಆತನ ವಾರಸುದಾರರ ಹೆಸರು ಮಾತ್ರ ಮುಟೇಶನ್ ಆಗಿರುವುದು ನಿಪಿ-18 ಎಂದು ಗುರುತಿಸಿಕೊಂಡ ದಾಖಲೆಯಿಂದ ಕಂಡುಬರುತ್ತದೆ. ಸದರಿ ವಾದಿ ಹಾಗೂ ವೆಂಕಪ್ಪ ಗಣಪತಿ ಆಚಾರಿ ಅವರ ಪ್ರಮಾಣಪತ್ರ ಹಾಗೂ ಹೇಳಿಕೆ ಪತ್ರ ಪಡೆದ ನಂತರವೇ ನಿಪಿ-15 ರಂತೆ ಭೂ ನ್ಯಾಯ ಮಂಡಳಿಯು ಆದೇಶ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದರೂ ಸಹ ಸ. ನಂ. 205/3 ರ ಪೈಕಿ 0-4-0 ಆಸ್ತಿಗೆ ಕೇವಲ ವೆಂಕಪ್ಪ ಗಣಪತಿ ಆಚಾರಿ ರವರ ಹೆಸರು ಮಾತ್ರ ಯಾವ ಕಾರಣಕ್ಕಾಗಿ ಮುಂದುವರೆಯಿತು ಮತ್ತು ವಾದಿ ಹೆಸರು ಸದರಿ ಭೂನ್ಯಾಯ ಮಂಡಳಿ ಆದೇಶದ ಪ್ರಕಾರ ಕಂದಾಯ ದಾಖಲೆಗಳಲ್ಲಿ ಮುಂದುವರಿದಿರುವುದಿಲ್ಲ ಎಂಬುವುದರ ಕುರಿತು ವಾದಿ ತನ್ನ ದಾವೆಯಲ್ಲಿ ಸ್ಪಷ್ಟಪಡಿಸಿರುವುದಿಲ್ಲ. ಈ ಕುರಿತು ವಾದಿ ಪರ ವಕೀಲರು ತಮ್ಮ ವಾದದಲ್ಲಿ ಒಂದೇ ಆಸ್ತಿಗೆ ಸಂಬಂಧಿಸಿದಂತೆ ಭೂನ್ಯಾಯ ಮಂಡಳಿಯಿಂದ ಎರಡೆರಡು ಆದೇಶ (double judgment) ಆಗಿದ್ದರಿಂದ ಕಂದಾಯ ಇಲಾಖೆಯಲ್ಲಿ ಆ ಕುರಿತು ಮುಟೇಶನ್ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಸ. ನಂ. 205/3 ಕ್ಕೆ ಸಂಬಂಧಿಸಿದಂತೆ ಭೂನ್ಯಾಯ ಮಂಡಳಿಯವರು ಎರಡೆರಡು ಆದೇಶವನ್ನು ಮಾಡಿರುವ ಬಗ್ಗೆ ಯಾವುದೇ ಪೂರಕ ಸಾಕ್ಷ್ಯಾಧಾರಗಳನ್ನು ನೀಡಿರುವುದಿಲ್ಲ.

**15.** ಅದು ಅಲ್ಲದೆ ದಾವೆ ಚಾಲ್ತಿಯಲ್ಲಿದ್ದಾಗ ಸದರಿ ಭೂನ್ಯಾಯ ಮಂಡಳಿಯವರು ದಾವಾಸ್ತಿಯ ಕುರಿತಾಗಿ ಇರುವ ಸಂಪೂರ್ಣ ಕಡತವನ್ನು ತರಿಸಿಕೊಂಡಿದ್ದು ಅದರಲ್ಲಿಯೂ

ಸಹ ದಾವಾಸ್ತಿ ಕುರಿತಂತೆ ವಾದಿ –ಪ್ರತಿವಾದಿಯರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳ ವಿಷಯಗಳನ್ನೇ ನಮೂದಿಸಿರುತ್ತಾರೆ ಹೊರತು ಒಂದೇ ಸರ್ವೆ ನಂಬರಿನ ಕುರಿತಂತೆ ಎರಡೆರಡು ಆದೇಶವನ್ನು ಮಾಡಿರುವುದು ಕಂಡುಬಂದಿರುವುದಿಲ್ಲ. ಒಂದು ವೇಳೆ ವಾದಿ ಪರ ತಳೆದ ನಿಲುವಿನಂತೆ ಸ. ನಂ. 205/3 ರ ಪೈಕಿ 0–4–0 ಆಸ್ತಿಗೆ ಎರಡೆರಡು ಆಸ್ತಿಗಳನ್ನು ಭೂನ್ಯಾಯ ಮಂಡಳಿ ಆದೇಶವನ್ನು ಮಾಡಿದ್ದರೆ ಆ ಕುರಿತಾಗಿ ವಾದಿ ಸೂಕ್ತ ಕ್ರಮ ಕೈಗೊಳ್ಳಲು ಸ್ವತಂತ್ರನಿರುತ್ತಾನೆ. ತೆಂಕಣಕೇರಿ ಗ್ರಾಮದ ಸ ನಂ. 205/3 ರ ಪೈಕಿ 0–4–0 ಆಸ್ತಿಯ ಕುರಿತಂತೆ ನಿಪಿ–15 ರಂತೆ ಭೂನ್ಯಾಯ ಮಂಡಳಿ ಮಾಡಿದ ಮಂಜೂರಿ ಆದೇಶದಲ್ಲಿ ವಾದಿಯ ಹೆಸರು ಇದ್ದರೂ ಸಹ ಆ ಕುರಿತಾಗಿ ತದನಂತರದಲ್ಲಿ ಕಂದಾಯ ದಾಖಲೆಗಳಲ್ಲಿ ಆತನ ಹೆಸರು ಮುಂದುವರೆದಿರುವುದಿಲ್ಲ. ಆದ್ದರಿಂದ ಸದರಿ ದಾವೆಯಲ್ಲಿ ತಿಳಿಸಿದಂತೆ ವಾದಿಗೆ ಭೂನ್ಯಾಯ ಮಂಡಳಿ ಸ ನಂ. 205/3 ರಲ್ಲಿ 0–4–0 ಆಸ್ತಿಯನ್ನು ಮಂಜೂರಿ ಮಾಡಿದೆ ಎಂದು ಕಂಡುಬಂದರೂ ಸಹ ತದನಂತರದಲ್ಲಿ ಆತನ ಹೆಸರು ಕಂದಾಯ ದಾಖಲೆಗಳಲ್ಲಿ ಯಾವ ಕಾರಣಕ್ಕಾಗಿ ಮುಂದುವರೆದಿರುವುದಿಲ್ಲ ಎಂಬುವುದನ್ನು ಸ್ಪಷ್ಟಪಡಿಸದ ಹೊರತು ಹಾಗೂ ಆ ಕುರಿತು ವೆಂಕಪ್ಪ ಗಣಪತಿ ಆಚಾರಿ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿ ಸೂಕ್ತ ಪರಿಹಾರ ಕೇಳದ ಹೊರತು ದಾವಾ ಜಮೀನು ಆಸ್ತಿಗೆ ವಾದಿಯು ಸಹ ಗೇಣಿದಾರನೆಂದು ಪರಿಗಣಿಸಲು ಅವಕಾಶವಿರುವುದಿಲ್ಲ.

**16.** ಸ ನಂ. 205/3 ರಲ್ಲಿಯ 0-4-0 ವಿಸ್ತೀರ್ಣ ದಲ್ಲಿ ವಾದಿ ಮನೆ ಕಟ್ಟಿಸಿಕೊಂಡು ಅದರ ಕಬ್ಜಾ ವಹಿವಾಟಿಯನ್ನು ಹೊಂದಿ 50 ವರ್ಷಗಳಿಂದಲೂ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ. ಸದರಿ ಮನೆಯನ್ನು ಭೂಸುಧಾರಣೆ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿಯೇ ಕಟ್ಟಿಸಿದ್ದರಿಂದ ಅದರ ಪಂಚಾಯತ ದಾಖಲಾತಿಗಳು ಪ್ರತಿವಾದಿ ಹೆಸರಿನಲ್ಲಿದ್ದು, ಕಾಯ್ದೆ ತೊಡಕು ಉಂಟಾಗಬಾರದೆಂದು ಪ್ರತಿವಾದಿ ದಾವಾಸ್ತಿಯನ್ನು ವಾದಿಗೆ ಬಿಟ್ಟುಕೊಡಲು 6000/- ರೂ. ಹಣಕ್ಕೆ ಪ್ರಮಾಣಪತ್ರವನ್ನು ಮಾಡಿ ಆ ಕುರಿತಾಗಿ ರೂ. 3000/- ಪಡೆದ ಬಗ್ಗೆ ರಶೀದಿಯನ್ನು ಸಹ ಬರೆದುಕೊಟ್ಟಿರುತ್ತಾರೆ. ಕಾರಣ ಸದರಿ ಮನೆಯನ್ನು ವಾದಿಯ ಹೆಸರಿನಲ್ಲಿ ಖರೀದಿ ಹಾಕಿ ಕೊಡಬೇಕೆಂದು ದಾವೆಯಲ್ಲಿ ಮಾಗಣಿ ಮಾಡಿರುತ್ತಾರೆ. ಸದರಿ ಸಂಗತಿಗಳನ್ನು ಅಲ್ಲಗಳೆದು ವಾದಿ ಹಾಜರುಪಡಿಸಿದ ಪ್ರಮಾಣಪತ್ರ ಹಾಗೂ ರಶೀದಿಗಳು ಎಲ್ಲವೂ ಸೃಷ್ಟಿಸಿದವುಗಳಿರುತ್ತವೆಂದು ಪ್ರತಿವಾದಿಯ ನಿಲುವಿರುತ್ತದೆ. ಈ ಕುರಿತು ವಾದಿ ಪರ ನಿಪಿ-1 ಮತ್ತು 2 ಎಂದು ದಾಖಲೆಗಳನ್ನು ಗುರುತಿಸಿಕೊಂಡು ತಮ್ಮ ಮಾಗಣಿಗೆ ಪೂರಕವೆಂಬಂತೆ ನಿಪಿ-1 ಪ್ರಮಾಣಪತ್ರದಲ್ಲಿ ಇರುವ ಸಹಿಯನ್ನು ಗುರುತಿಸಿದಂತಹ ವಕೀಲರ ಸಾಕ್ಷಿಯನ್ನು ಪಿಡಬ್ಲ್ಯೂ-2 ಎಂದು ಮಾಡಿಸಿರುತ್ತಾರೆ. ನಿಪಿ-1 ಪ್ರಮಾಣಪತ್ರವನ್ನು ಅವಲೋಕಿಸಲು ಪ್ರತಿವಾದಿಗೆ ಸಂಬಂಧಿಸಿದ ಮನೆ ನಂ. 86/ಎ ಯನ್ನು ಆತ್ಮೀಯನಾದ ವಾದಿಗೆ ನೀಡಿ ಅದನ್ನು ಸಂಪೂರ್ಣ ನಿರ್ವಹಣೆ ಮಾಡಿಕೊಂಡು ಹೋಗತಕ್ಕದ್ದು ಮತ್ತು ಈ ಕುರಿತು ಪಂಚಾಯತಿ ದಾಖಲೆ ಆತನ ಹೆಸರಿನಲ್ಲಿ ಮಾಡಬೇಕೆಂದು ತಿಳಿಸಿರುವುದು ಕಂಡುಬರುತ್ತದೆ. ನಿಪಿ-2 ದಾಖಲೆಯಲ್ಲಿ ಸದರಿ ವಾಸ್ತವ್ಯದ ಮನೆ ಕುರಿತಾಗಿ 6,000/-

ರೂ. ಹಣದ ಪೈಕಿ 3,000/– ರೂ. ಹಣ ಪಡೆದಿದ್ದು, ಉಳಿದ ಹಣವನ್ನು ನಿಗದಿಪಡಿಸಿದ ನಂತರ ದಿನದಂದು ಪಡೆಯುವುದಾಗಿ ಬರೆದುಕೊಟ್ಟಿದ್ದು ಕಂಡುಬರುತ್ತದೆ. ದಾವೆಯಲ್ಲಿ ದಾವಾಸ್ತಿಯ ಕಿಮ್ಮತ್ತು ರೂ. 6,000/– ನಿಗದಿಪಡಿಸಿಕೊಂಡಿರುತ್ತಾರೆ. ಕಾರಣ ದಾವಾಸ್ತಿಯ ಕಿಮ್ಮತ್ತು ರೂ. 100/–ಗಳಿಗಿಂತ ಹೆಚ್ಚಿರುವುದರಿಂದ ನೋಂದಾಯಿತವಲ್ಲದ ಕಾಗದಪತ್ರದ ಅಡಿಯಲ್ಲಿ ಆಸ್ತಿಯ ಹಸ್ತಾಂತರ ಮಾಡಲು ನೋಂದಾಯಿತ ಕಾಯ್ದೆ ಕಲಂ. 17 ರಡಿಯಲ್ಲಿ ಅವಕಾಶವಿರುವುದಿಲ್ಲ.

**17.** ಅದು ಅಲ್ಲದೆ ದಾವೆಯಲ್ಲಿ ತಿಳಿಸಿದ ಮನೆಯು ಭೂನ್ಯಾಯ ಮಂಡಳಿಯವರು ತಮಗೆ ಮಂಜೂರಿ ಮಾಡಿದ 0–4–0 ಕ್ಷೇತ್ರದಲ್ಲಿಯೇ ಇರುತ್ತದೆ ಎಂಬುವುದನ್ನು ವಾದಿ ಪೂರಕ ಸಾಕ್ಷ್ಯಾಧಾರಗಳ ಮುಖಾಂತರ ಸ್ಪಷ್ಟಪಡಿಸಿರುವುದಿಲ್ಲ. ದಾವಾಸ್ತಿ ಸ.ನಂ. 205/3 ಇದು ಒಟ್ಟು 0–7–0 ಆಸ್ತಿ ಇದ್ದು, ಅದರಲ್ಲಿ 0–4–0 ಆಸ್ತಿ ವಾದಿ ಹಾಗೂ ಆತನ ಸಂಬಂಧಿಯಾದ ವೆಂಕಪ್ಪ ಗಣಪತಿ ಆಚಾರಿಯವರಿಗೆ, 0–1–0 ಕೇಶವ ಬೊಮ್ಮಯ್ಯ ನಾಯ್ಕ ಹಾಗೂ ಉಳಿದ 0–2–0 ಪ್ರತಿವಾದಿಯ ಹೆಸರಿನಲ್ಲಿರುವುದನ್ನು ನಿಡಿ–21 ಎಂದು ಗುರುತಿಸಲಾದ ಹಿಸ್ಸೆ ನಮೂನೆ ನಂ. 4 ರಲ್ಲಿ ತೋರಿಸಿರುವುದು ಕಂಡುಬರುತ್ತದೆ. ಕಾರಣ ಸದರಿ ಮನೆಯ ಆಸ್ತಿ ಸ. ನಂ. 205/3 ರಲ್ಲಿಯ 0–4–0 ಆಸ್ತಿಯಲ್ಲಿ ಇರುತ್ತದೆ ಎಂಬುವುದನ್ನು ವಾದಿ ಪೂರಕ ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸಿರುವುದಿಲ್ಲ.

**18.** ದಾವಾಸ್ತಿ ಕುರಿತಂತೆ ಪಹಣಿ ಪತ್ರಿಕೆಯ ತಿದ್ದುಪಡಿ ಕೇಳಿ ವಾದಿ ಮಾಗಣಿ ಮಾಡಿರುತ್ತಾರೆ. ಸದರಿ ಸ. ನಂ. 205/3 ರ ಪೈಕಿ 0–4–0 ಆಸ್ತಿಗೆ ತಾನು ಸಹ ವೆಂಕಪ್ಪ

ಗಣಪತಿ ಆಚಾರಿರವರ ಜೊತೆ ಸಾಮೂಹಿಕ ಮಾಲೀಕ ಎಂಬುವುದರ ಕುರಿತು ವಾದಿಯ ಹೇಳಿಕೆಯಾಗಲೀ ಅಥವಾ ಆ ಕುರಿತು ದಾವೆಯಲ್ಲಿ ಮಾಗಣೆಯಾಗಲೀ ಇರುವುದಿಲ್ಲ. ಕಾರಣ ದಾವಾಸ್ತಿಯ ಪಹಣಿಪತ್ರಿಕೆಯಲ್ಲಿ ವಾದಿಯ ಹೆಸರನ್ನು ಸೇರಿಸಿ ತಿದ್ದುಪಡಿ ಮಾಡಲು ಆದೇಶಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ ವಿವಾದಾಂಶ ನಂ. 1 ರಿಂದ 5 ಕ್ಕೆ '**ನಕಾರಾತ್ಮಕ**' ಎಂದು ಉತ್ತರಿಸಿದ್ದೇನೆ.

**19.** **ವಿವಾದಾಂಶ ನಂ.6**:– ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ.......

## ಆದೇಶ

ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಭೂ–ನ್ಯಾಯಮಂಡಳಿ ಆದೇಶದ ಕಡತದ ಫೈಲನಲ್ಲಿ ನಿಶಾನೆಗೆ ಒಳಪಟ್ಟ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ದಾವೆಯಲ್ಲಿಟ್ಟುಕೊಂಡು ಮೂಲ ಕಡತದ ಫೈಲ್‌ನ್ನು ಸಂಬಂಧಪಟ್ಟ ಕಚೇರಿಗೆ ಮರಳಿಸಲು ಕಚೇರಿಗೆ ಈ ಮೂಲಕ ಆದೇಶಿಸಲಾಗಿದೆ.

ಅಂತಿಮ ಆದೇಶದಂತೆ ಡಿಕ್ರಿ ಬರೆಯಿರಿ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿದ ನಂತರ ಅದನ್ನು ಓದಿ ತಿದ್ದುಪಡಿ ಮಾಡಿ ನಂತರ ಅದನ್ನು ಇಂದು ದಿನಾಂಕ 9 ನೇ ನವೆಂಬರ್ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Digitally signed by
PRASHANT BADAWADAGI

**( ಪ್ರಶಾಂತ ಬಾದವಾಡಗಿ )**

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ಅಂಕೋಲಾ**

**<u>ಅನುಬಂಧ</u>**

**<u>ವಾದಿ ಪರವಾಗಿ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ</u>**

ಪಿ.ಡಬ್ಲ್ಯೂ. 1 – ರಾಜೇಶ ಗಣಪತಿ ಆಚಾರಿ

ಪಿ.ಡಬ್ಲ್ಯೂ. 2 – ಉಮೇಶ ನಾಗಪ್ಪ ನಾಯ್ಕ

**<u>ಪ್ರತಿವಾದಿಯರ ಪರವಾಗಿ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ</u>**

ಡಿಡಬ್ಲ್ಯೂ-1 – ವಿಘ್ನೇಶ್ವರ ತಂ. ಮಂಜುನಾಥ ರಾಯ್ಕರ್ ಯಾನೆ ಶೇಟ್

**<u>ವಾದಿ ಪರವಾಗಿ ಗುರುತಿಸಲ್ಪಟ್ಟ ದಾಖಲೆಗಳುಃ</u>**

ನಿ.ಪಿ.1 – ಪ್ರತಿವಾದಿಯು ಬರೆದುಕೊಟ್ಟಿರುವ ಪ್ರಮಾಣಪತ್ರದ ಮೂಲ ಪ್ರತಿ

ನಿ.ಪಿ.1 (ಎ) – ಪಿಡಬ್ಲ್ಯೂ-2 ರವರ ಸಹಿ

ನಿ.ಪಿ.1 (ಬಿ) ಮತ್ತು (ಸಿ)– ಪ್ರತಿವಾದಿಯ ಸಹಿಗಳು

ನಿ.ಪಿ.2 – ಹಣ ಪಾವತಿಸಿದ ರಶೀದಿ

ನಿ.ಪಿ.3 – ಕಂದಾಯ ಪಾವತಿಸಿದ ರಶೀದಿ

ನಿ.ಪಿ.4 – ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ನೀಡಿರುವ ನೋಟೀಸು

ನಿ.ಪಿ.5 – ವಿದ್ಯುಚ್ಛಕ್ತಿ ಮಂಡಳಿ, ಅಂಕೋಲಾರವರು ಕಳಿಸಿರುವ ಪತ್ರ

ನಿ.ಪಿ.6 ರಿಂದ 12 – ದಾವಾಸ್ತಿಗೆ ಸಂಬಂಧಿಸಿದ 7 ಪೋಟೋಗಳು

ನಿ.ಪಿ. 13 – ಸಿಡಿ

ನಿ.ಪಿ. 14 – ಪಡಿತರ ಚೀಟಿ

ನಿ.ಪಿ. 15 – ಅಂಕೋಲಾ ಭೂನ್ಯಾಯ ಮಂಡಳಿಯ ಆದೇಶದ ದೃಢೀಕೃತ ಪ್ರತಿ

ನಿ.ಪಿ. 16 – ಫಾರಂ ನಂ. 10 ರ ದೃಢೀಕೃತ ಪ್ರತಿ

ನಿ.ಪಿ. 17 – ಪೋಡಿ ಮ್ಯಾಪ್

ನಿ.ಪಿ. 18 ಮತ್ತು 19 – ಮುಟೇಶನ್ ಪ್ರತಿಗಳು

ನಿ.ಪಿ. 20 ಮತ್ತು 21 – ಪಹಣಿ ಪತ್ರಿಕೆಗಳು

ನಿ.ಪಿ. 22 – ಲೀಗಲ್ ನೋಟೀಸಿನ ಕಚೇರಿ ಪ್ರತಿ

ನಿ.ಪಿ. 23 – ವಿಧ್ಯುತ್ ಪಾವತಿಸಿದ ಬಿಲ್

ನಿ.ಪಿ. 24 – ಪ್ರ.ವ.ವರದಿಯ ದೃಢೀಕೃತ ಪ್ರತಿ

ನಿ.ಪಿ. 25 – ದೂರಿನ ದೃಢೀಕೃತ ಪ್ರತಿ

ನಿ.ಪಿ. 26 – ವಾದಿಯ ಮರುಹೇಳಿಕೆಯ ದೃಢೀಕೃತ ಪ್ರತಿ

ನಿ.ಪಿ. 27 – ಅಂತಿಮ ವರದಿಯ ದೃಢೀಕೃತ ಪ್ರತಿ

ನಿ.ಪಿ. 28 – ದಾವಾ ಸ್ವತ್ತಿನ 2014–15 ರ ಸಾಲಿನ ಮನೆ ಆಕರಣೆ ಯಾದಿ

ನಿ.ಪಿ. 29 – ಸಾರ್ವಜನಿಕ ಮಾಹಿತಿ ಅಧಿಕಾರಿಯವರು ನೀಡಿದ ಪತ್ರ

ನಿ.ಪಿ. 30 – ಕಂದಾಯ ನೀರಿಕ್ಷಕರವರ ಅರ್ಜಿ ಪ್ರತಿ

ನಿ.ಪಿ. 31 – ಜವಾಬು

ನಿ.ಪಿ. 32 – ನಮೂನೆ –12

ನಿ.ಪಿ. 33 – ಪರಿಪತ್ರ

ನಿ.ಪಿ. 34 – ತಹಶೀಲ್ದಾರವರ ಪತ್ರ

ನಿ.ಪಿ. 35 – ನಿವೇದನೆ

ನಿ.ಪಿ. 36 – ಅರ್ಜಿ

ನಿ.ಪಿ. 37 – ಅರ್ಜಿ ಪ್ರತಿ

ನಿ.ಪಿ. 38 – ಫಾರ್ಮ ನಂ. 10

**ಪ್ರತಿವಾದಿಯ ಪರವಾಗಿ ಗುರುತಿಸಲ್ಪಟ್ಟ ದಾಖಲೆಗಳುಃ**

ನಿ.ಡಿ .1 ಮತ್ತು 2 – ಪಹಣಿ ಪತ್ರಿಕೆಗಳು

ನಿ.ಡಿ . 3 ಮತ್ತು 4 – ಮುಟೇಶನ್ ಪ್ರತಿಗಳು

ನಿ.ಡಿ . 5 – ನಕ್ಷೆ

ನಿ.ಡಿ . 6 – ಕಂದಾಯ ತೆರಿಗೆ ರಶೀದಿ

ನಿ.ಡಿ . 7 – ಜಿಪಿಎ ಪ್ರತಿ

ನಿ.ಡಿ . 8 – ಫಾರಂ ನಂ. 10

ನಿ.ಡಿ . 9 – ಟ್ರಿಬ್ಯುನಲ್ ಆದೇಶದ ರೋಜನಾಮೆ ಪ್ರತಿ

ನಿ.ಡಿ . 10 – ಕಬೂಲ ಪತ್ರ

ನಿ.ಡಿ . 11 ಮತ್ತು 12 – ಅಫಿಡಾವಿಟ್‌ಗಳು

ನಿ.ಡಿ . 13 – ಅರ್ಜಿಯ ಪ್ರತಿ

ನಿ.ಡಿ . 14 – ಫಾರಂ ನಂ. 10 ರ ಪ್ರತಿ

ನಿ.ಡಿ . 15 – ಜವಾಬಿನ ಪ್ರತಿ

ನಿ.ಡಿ . 16 – ಆರ್ ಐ ರವರ ವರದಿ

ನಿ.ಡಿ . 17 – ಎಫ್ ಐ ಆರ್

ನಿ.ಡಿ . 18 – ಅಪರಾಧ ವರದಿ

ನಿ.ಡಿ . 19 – ಘಟನಾ ಸ್ಥಳದ ಪಂಚನಾಮೆ

ನಿ.ಡಿ . 20 – ಹಿಸ್ಸಾ ನಂ. 11

ನಿ.ಡಿ . 21 – ಹಿಸ್ಸಾ ನಂ. 4

ನಿ.ಡಿ . 22 ಮತ್ತು 23 – ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳು

ನಿ.ಡಿ . 24 ಮತ್ತು 25 – ಮುಟೇಶನ್ ಪ್ರತಿಗಳ ದಢೀಕೃತ ನಕಲುಗಳು

**<u>ನ್ಯಾಯಾಲಯದ ಪರವಾಗಿ ಗುರುತಿಸಲ್ಪಟ್ಟ ದಾಖಲೆಗಳುಃ</u>**

ನಿ.ಪಿ.–1 – ವೆಂಕಪ್ಪ ಗಣಪತಿ ಆಚಾರಿ ಭೂನ್ಯಾಯ ಮಂಡಳಿಗೆ ದಿಃ 23–5–1976 ರಲ್ಲಿ ಸಲ್ಲಿಸಿದ ಅರ್ಜಿ

ನಿ.ಪಿ.–2 –ವಿಶೇಷ ತಹಶೀಲ್ದಾರರವರಿಗೆ ನೀಡಿದ ಅರ್ಜಿ

ನಿ.ಪಿ.–3 –ದೂರಿನ ಪ್ರತಿಯ ಭಾಗ

Digitally signed by PRASHANT BADAWADAGI

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ಅಂಕೋಲಾ**

**ಪ್ರತ್ಯೇಕವಾಗಿ ತೀರ್ಪಿನ ಆದೇಶವನ್ನು**
**ತೆರೆದ ನ್ಯಾಯಾಲಯದಲ್ಲಿ ಘೋಷಿಸಿಲಾಯಿತು**

## ಆದೇಶ

ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಭೂ–ನ್ಯಾಯಮಂಡಳಿ ಆದೇಶದ ಕಡತದ ಫೈಲನಲ್ಲಿ ನಿಶಾನೆಗೆ ಒಳಪಟ್ಟ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ದಾವೆಯಲ್ಲಿಟ್ಟುಕೊಂಡು ಮೂಲ ಕಡತದ ಫೈಲ್‌ನ್ನು ಸಂಬಂಧಪಟ್ಟ ಕಚೇರಿಗೆ ಮರಳಿಸಲು ಕಚೇರಿಗೆ ಈ ಮೂಲಕ ಆದೇಶಿಸಲಾಗಿದೆ.

ಅಂತಿಮ ಆದೇಶದಂತೆ ಡಿಕ್ರಿ ಬರೆಯಿರಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಅಂಕೋಲಾ**